ಅವನ ಸೃಷ್ಟಿಯ ಸಂಗೀತ ಸಾರ್ವತ್ರಿಕವಾದದ್ದು. ಅದು ರಾಷ್ಟ್ರೀಯ ಗಡಿಗಳನ್ನು ಸುಲಭವಾಗಿ ದಾಟಿಬಿಡಬಲ್ಲದು; ಯಾವುದೇ ಸಂಸ್ಕೃತಿಯ ಶ್ರೋತೃಗಳ ಜೊತೆ ತತ್‌ಕ್ಷಣ ಸಂವಾದಿಸಬಲ್ಲದು.

ಹೀಗೆ ಸಂವಾದಿಸಬಲ್ಲ, ಸಂವಹಿಸಬಲ್ಲ ಸಂಗೀತದ ಸಾರ್ವತ್ರಿಕ ಶಕ್ತಿಗೆ ಪರಿಮಿತಿಯೇನೂ ಇಲ್ಲವೆ? ಕೆಲವು ಸಮಸ್ಯೆಗಳಿವೆ ಹೌದು. ಉದಾಹರಣೆಗೆ ಪಾಶ್ಚಾತ್ಯರು ಭಾರತೀಯ ಸಂಗೀತವನ್ನು ಸುಲಭವಾಗಿ ಆಸ್ವಾದಿಸಲಾರರು. ಈ ಮಾತು ಪಾಶ್ಚಾತ್ಯ ಸಂಗೀತವನ್ನು ಆಸ್ವಾದಿಸಲಾರದ ಭಾರತೀಯರಿಗೂ ಅನ್ವಯಿಸುತ್ತದೆ. ಆದರೇನು, ಯಾರೇ ಆಗಲಿ ತೆರೆದ ಮನಸ್ಸಿನಿಂದ ಆಲಿಸಿದರೆ ಬೇರೊಂದು ಪದ್ಧತಿಯ ಸಂಗೀತವನ್ನು ಗ್ರಹಿಸಿ ಆನಂದಿಸಬಹುದು. ಪ್ರಸಿದ್ಧ ಸಂಗೀತಗಾರ ಬಾಲಮುರಳೀಕೃಷ್ಣ ಅವರು ಕರ್ನಾಟಕ ಪದ್ಧತಿಯ ಸಂಗೀತವನ್ನು ಪರಿಪೂರ್ಣವಾಗಿ ಕಲಿತರೆ ಪ್ರಪಂಚದ ಯಾವುದೇ ಭಾಗದ ಸಂಗೀತವನ್ನು ಆಸ್ವಾದಿಸಬಹುದು ಎಂದೊಮ್ಮೆ ಹೇಳಿದ್ದರು. ರೋಮ ರೋಲಾ "ಭಾರತೀಯ ಸಂಗೀತ ಯೂರೋಪಿನ ಹಳೆಯ ಸಂಗೀತಕ್ಕಿಂತ ಬೇರೆಯಾಗಿದೆ, ಅದೂ ಕ್ವಚಿತ್ತಾಗಿ" ಎಂಬು ನಂಬಿದ್ದವನು. ಬಹುಶಃ ಇದೇ ಕಾರಣದಿಂದಲೇ ಅವನು ಕಳೆದ ಶತಮಾನದ ಎರಡನೆಯ ದಶಕದಲ್ಲಿ ಯೂರೋಪಿನಲ್ಲಿ ಭಾರತೀಯ ಸಂಗೀತವನ್ನು ಹರಡಲು ಪ್ರಯತ್ನಿಸಿ ಸ್ವಲ್ಪಮಟ್ಟಿಗೆ ಯಶಸ್ಸನ್ನೂ ಕಂಡಿದ್ದ ದಿಲೀಪ್ ಕುಮಾರ್ ರಾಯ್ ಅವರ ಸಂಗೀತದಲ್ಲಿ ವಿಶೇಷ ಆಸಕ್ತಿ ತೋರಿಸಿದ್ದು.

ಸಂಗೀತ ಸಂಪೂರ್ಣವಾಗಿ ನಮ್ಮ ಮನಸ್ಸಿನ ಲಕ್ಷ್ಯವನ್ನು ಸೆಳೆಯುವುದಕ್ಕಾಗಿಯೇ ವಿನ್ಯಾಸಗೊಂಡಿರುವ ಕಲೆ. ಅದರ ಭಾಷೆಯೆಂದರೆ ಸುಸ್ವರದ, ಸ್ವರಮೇಳದ, ತಾಳಗತಿಯ ಭಾಷೆ. ಅದು ಅವ್ಯವಸ್ಥೆಯಲ್ಲಿ ಸುವ್ಯವಸ್ಥೆಯನ್ನು ಕಂಡುಕೊಳ್ಳುವ ಭಾಷೆ. ಆದ್ದರಿಂದಲೇ ಅದು ಸರ್ವಜನಾಂಗದ ಶಾಂತಿಯ ಭಾಷೆ.

1958ರಷ್ಟು ಹಿಂದೆ ಉಸ್ತಾದ್ ಬಡೇ ಗುಲಾಂ ಅಲಿ ಖಾನ್ ಅವರು ಹೇಳಿದ ಮಾತು: "ಭಾರತದಲ್ಲಿ ಪ್ರತಿಯೊಂದು ಕುಟುಂಬವೂ ತನ್ನ ಒಬ್ಬ ಸದಸ್ಯನಿಗಾದರೂ ಸಂಗೀತ ಕಲಿಸಿದ್ದಿದ್ದರೆ ನಮ್ಮ ದೇಶ ಭಾರತ, ಪಾಕಿಸ್ತಾನಗಳಾಗಿ ವಿಭಜನೆಗೊಳ್ಳುತ್ತಿರಲಿಲ್ಲ."

## ಎಸ್. ದಿವಾಕರ್

ಬೆಂಗಳೂರು ಜಿಲ್ಲೆಯ ಸೋಮತ್ತನಹಳ್ಳಿಯಲ್ಲಿ ಹುಟ್ಟಿದ ದಿವಾಕರ್ ತಮ್ಮ ಅನನ್ಯ ಬರವಣಿಗೆಯಿಂದ ಕನ್ನಡ ಓದುಗರ ಪ್ರೀತಿಗೆ ಪಾತ್ರರಾದವರು. ಪ್ರಕಟಿತ ಕೃತಿಗಳು: 'ಇತಿಹಾಸ', 'ಎಲ್ಲ ಬಲ್ಲವರಿಲ್ಲ ಈ ಊರಿಲ್ಲಿ', 'ಆಯ್ದ ಕತೆಗಳು' (ಕಥಾ ಸಂಕಲನಗಳು), 'ಆತ್ಮಚರಿತ್ರೆಯ ಕೊನೆಯ ಪುಟ' (ಕವನ ಸಂಕಲನ), 'ನಾಪತ್ತೆಯಾದ ಗ್ರಾಮಾಫೋನು', 'ಕೃಷ್ಣಲೀಲೆಯಿಂದ ರಾಮರಾಜ್ಯಕ್ಕೆ' (ಪ್ರಬಂಧಗಳು), 'ಪ್ರಪಂಚ ಪುಸ್ತಕ' (ವಿಮರ್ಶಾ ಲೇಖನಗಳು), 'ಪಂಡಿತ ಭೀಮಸೇನ ಜೋಶಿ' (ವ್ಯಕ್ತಿಚಿತ್ರ), 'ಕಥಾಜಗತ್ತು', 'ಜಗತ್ತಿನ ಅತಿಸಣ್ಣ ಕತೆಗಳು', 'ಉತ್ತರ ದಕ್ಷಿಣ ದಿಕ್ಕುಗಳನ್ನು ಬಲ್ಲವನು', 'ಹಾರಿಕೊಂಡು ಹೋದವನು' (ಅನುವಾದಿತ ಕಥೆಗಳು), 'ವೆನಿಸ್ಸಿನಲ್ಲಿ ಸಾವು', 'ಹಳ್ಳಿ', 'ಪೋಸ್ಟ್‌ಮ್ಯಾನ್' (ಅನುವಾದಿತ ಕಾದಂಬರಿಗಳು), 'ಮಾಸ್ಟರ್ ಬಿಲ್ಡರ್ '(ಅನುವಾದಿತ ನಾಟಕ), 'ಶತಮಾನದ ಸಣ್ಣಕತೆಗಳು', 'ಸಣ್ಣಕತೆ 1983', 'ಕನ್ನಡ ಅತಿ ಸಣ್ಣಕತೆಗಳು', 'ನಾದದ ನವನೀತ', 'ಬೆಸ್ಟ್ ಆಫ್ ಕೇಫ' (ಸಂಪಾದಿತ ಕೃತಿಗಳು). ದಿವಾಕರ್ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.